

ಕೋತಿಗಳು ಸಾರ್ ಕೋತಿಗಳು...

ಜಾಗಗಳಿಗೆ ನುಗ್ಗಿ ಅಧಿಕಾರಿ–ಮಂತ್ರಿ ವಲಯದವರ ವಸ್ತು–ಫೈಲು–ಚೀಲಗಳಿಗೆ ಕೈ ಹಾಕುವುದು, ಕಿರುಚಿ ಹೆದರಿಸುವುದು, ಕೈಯಲ್ಲಿರುವ ಆಹಾರ ಸಾಮಗ್ರಿಯನ್ನು ಕಿತ್ತುಕೊಂಡು ಓಡುವುದನ್ನು ಮಾಡುತ್ತಿದ್ದ ಮಂಗಗಳನ್ನು ನಿಯಂತ್ರಿಸುವುದು ಭದ್ರತಾ ಸಿಬ್ಬಂದಿಗೆ ತಲೆನೋವು ತಂದಿತ್ತು. ಮಂತ್ರಿಗಳ ಕಾರು ಡ್ರೈವರ್‌ಗಳನ್ನು ಮಂಗಗಳು ಕಚ್ಚಿ ಓಡಿದ ಘಟನೆಗಳೂ ಆಗಾಗ ನಡೆದಿದ್ದವು. ಇಂಥ ಸಂದರ್ಭದಲ್ಲೆಲ್ಲಾ ಕರೆ ಹೋಗುವುದು ಗುಲ್‌ಖಾನ್‌ಗೆ.

ದೆಹಲಿಯ ಉಪಮೇಯರ್, 2007ರ ಅಕ್ಟೋಬರ್‌ನಲ್ಲಿ ತಮ್ಮ ಮನೆಯ ಟೆರೇಸಿಗೆ ಬಂದು ದಾಂಧಲೆ ಎಬ್ಬಿಸಿ ರಂಪಾಟ ಮಾಡಿದ್ದ ಮಂಗನನ್ನು ಓಡಿಸುವ ಪ್ರಯತ್ನದಲ್ಲಿ ಆಯತಪ್ಪಿ ಬಿದ್ದು, ತಲೆಗೆ ತೀವ್ರ ಪೆಟ್ಟಾಗಿ ಪ್ರಾಣವನ್ನೇ ಕಳೆದುಕೊಂಡರು. ನಂತರ ಸಲ್ಲಿಕೆಯಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇವಾರಿ ಮಾಡಿದ ದೆಹಲಿ ನ್ಯಾಯಾಲಯ, ಮಂಗಗಳಿಗೆ ಸಾರ್ವಜನಿಕ ಸ್ಥಳಗಳಲ್ಲಿ ಆಹಾರ ನೀಡುವುದನ್ನು ನಿಷೇಧಿಸುವ ಆಜ್ಞೆ ಹೊರಡಿಸಿತು. ಉಪಟಳ ನೀಡುವ ಎಲ್ಲ ಕೋತಿಗಳನ್ನು ಹರಿಯಾಣ–ದೆಹಲಿ ಗಡಿಪ್ರದೇಶದ ಅಸೋಲಭಟ್ಟಿ ಅಭಯಾರಣ್ಯಕ್ಕೆ ಸ್ಥಳಾಂತರಿಸುವ ಆದೇಶ ನೀಡಿ, ಕೋತಿಗಳಿಗೆ ಸಂತಾನಶಕ್ತಿ ಹರಣ ಚಿಕಿತ್ಸೆ ನೀಡಲು ಸ್ಥಳೀಯ ವಿಶೇಷ ಸಮಿತಿ ರಚಿಸಲು ಸ್ಥಳೀಯ ಸಂಸ್ಥೆಗಳಿಗೆ ಹೇಳಿತು.

ಅಲ್ಲಿಂದಿಲ್ಲಿಗೆ ಹದಿನೈದು ವರ್ಷಗಳೇ ಕಳೆದಿವೆ. ಮಂಗಗಳ ಉಪಟಳ ನಿಂತಿಲ್ಲ. 20,000 ಕೋತಿಗಳನ್ನು ಅಭಯಾರಣ್ಯಕ್ಕೆ ವರ್ಗಾಯಿಸಲಾಯಿತು. ಅಲ್ಲಿನ ಸ್ಥಳಾವಕಾಶ ಕಿರಿದಾದ್ದರಿಂದ ಅರ್ಧದಷ್ಟು ಕೋತಿಗಳು ಅರಣ್ಯ ವ್ಯಾಪ್ತಿಯ ಹೊರಗೆ ಬಂದು ಜನರಿಗೆ ಉಪಟಳ ನೀಡಲು ಶುರುಮಾಡಿದವು. ಅವು ಖಾಲಿ ಮಾಡಿದ ಜಾಗಗಳಿಗೆ ಹೊಸ ಕೋತಿಗಳ ಆಗಮನವಾಗಿದೆ.

ಇದೇ ಜನವರಿಯಲ್ಲಿ ದೆಹಲಿಯ ಮುಖ್ಯ ನ್ಯಾಯಾಲಯದಲ್ಲಿ ಮತ್ತೊಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಯಿತು. ಮಂಗಗಳ ಸಂತಾನಶಕ್ತಿ ಹರಣಕ್ಕೆ ಮತ್ತು ವರ್ಗಾವಣೆಗೆ ಎಷ್ಟು ಖರ್ಚಾಗಿದೆ ಎಂದು ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು. ಮಂಗಗಳ ಉಪಟಳ ತಡೆಯಲು ಆಗುತ್ತಿಲ್ಲ, ಮಂಗಗಳನ್ನು ಹಿಡಿಯುವವರು ಆ ಕೆಲಸಕ್ಕೆ ಮುಂದೆ ಬರುತ್ತಿಲ್ಲ ಎಂದು ದೆಹಲಿಯ ಸರ್ಕಾರ ಉತ್ತರ ನೀಡಿತ್ತು.

## ಸಮಸ್ಯೆಗೆ ಹಲವು ಮುಖ

ಸರ್ಕಾರದ ಅಸಹಾಯಕತೆಯು ಸಮಸ್ಯೆಯ ತೀವ್ರತೆಯನ್ನು ಹೇಳುತ್ತಲೇ ಸಮಸ್ಯೆ ಬಗೆಹರಿಸುವಲ್ಲಿ ನಮ್ಮ ಕ್ರಮಗಳ ಟೊಳ್ಳುತನವನ್ನೂ ಬಯಲಿಗೆ ತಂದಿದೆ. ಜೈಪುರದಲ್ಲಿರುವ 'ವಾನರ ಸಂಶೋಧನಾ ಸಂಸ್ಥೆ' ದಿನಕ್ಕೆ 1000 ಮಂಗ ಕಡಿತದ ಪ್ರಕರಣಗಳ ದಾಖಲೆ ನೀಡಿದೆ. ರೇಬಿಸ್ ಮತ್ತು ಪ್ರಾಣಿಜನ್ಯ ಕಾಯಿಲೆ ಹಬ್ಬಿಸುವ ಮಂಗಗಳ ಕಡಿತ ಪ್ರಾಣಾಂತಿಕವೂ ಹೌದು. ಮೆದುಳಾಘಾತಕ್ಕೆ ಕಾರಣವಾಗುವ, 'ಮಂಗನ ಕಾಯಿಲೆ' ಎಂದು ಕರೆಸಿಕೊಳ್ಳುವ 'ಕ್ಯಾಸನೂರು ಫಾರೆಸ್ಟ್ ಕಾಯಿಲೆ'ಯೂ ಮಂಗಗಳಿಂದಲೇ ಹಬ್ಬುತ್ತಿದೆ. ಹಿಮಾಚಲ ಪ್ರದೇಶ ರಾಜ್ಯ, ಕೋತಿಗಳ ಹಾವಳಿಯಿಂದ ವಾರ್ಷಿಕ 500 ಕೋಟಿ ರೂ.ನಷ್ಟು ಬೆಳೆನಷ್ಟವಾಗುತ್ತಿದೆ ಎಂಬ ಲೆಕ್ಕ ನೀಡಿದೆ. ಸಮಸ್ಯೆಯ ಗಂಭೀರತೆಯನ್ನರಿತ ರಾಜ್ಯ ಸರ್ಕಾರ ಕಳೆದ 20 ವರ್ಷಗಳಲ್ಲಿ 1,70,169 ಮಂಗಗಳ ಸಂತಾನಶಕ್ತಿ ಹರಣ ಮಾಡಿದೆ. ಶೇ. 51ರಷ್ಟು ಮಂಗಗಳಿಗೆ ಸಂತಾನಶಕ್ತಿ ಹರಣವಾಗಿದ್ದರೂ ಅವುಗಳ ಉಪಟಳ ಕಡಿಮೆಯಾಗಿಲ್ಲ. 2016ರಲ್ಲೇ ಕೋತಿಗಳನ್ನು ಕ್ರಿಮಿ ಎಂದು ಪರಿಗಣಿಸಿ ರಾಜ್ಯ ಸರ್ಕಾರ ಸಾಮೂಹಿಕ ವಧೆಗೆ ಅನುಮತಿ ನೀಡಿದೆ. ಇದರಿಂದ ಹಿಮಾಚಲ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಶೇ 50ರಷ್ಟು ಕೋತಿಗಳ ಸಂಖ್ಯೆ ಕಡಿಮೆಯಾಗಿದ್ದರೂ ಉಳಿದವುಗಳಿಂದ ಕಿರಿಕಿರಿ ಈಗಲೂ ತಪ್ಪಿಲ್ಲ.

ಕೋತಿಗಳನ್ನು ಹನುಮಾನ್ ದೇವರ ಅವತಾರವೆಂದೇ ನಂಬುವ ಹಲವು ಸಮುದಾಯಗಳು ಕೋತಿಗಳ ವಧೆಯನ್ನು ಒಪ್ಪುವುದಿಲ್ಲ. ಮಂಗಗಳ ಕಾಟ ತಪ್ಪಿಸಿಕೊಳ್ಳಲು ಹಲವು ರಾಜ್ಯಗಳು ವಿವಿಧ ಪ್ರಯೋಗ, ಪ್ರಯತ್ನ ಎರಡನ್ನೂ ಮಾಡಿವೆ. ಅರಣ್ಯ ಇಲಾಖೆಗಳು ಸ್ಥಳಾಂತರಕ್ಕೆ ಕೈ ಹಾಕುತ್ತವೆ. ಸ್ಥಳಾಂತರಗೊಳಿಸಿದ ಕೋತಿಗಳನ್ನು ಬೇಲಿ ಹಾಕಿದ ಆವರಣದೊಳಗಿಡಬೇಕಾಗುತ್ತದೆ. ಆಗ ಅವುಗಳ ಸ್ವಭಾವದಲ್ಲಿ ಸಾಕಷ್ಟು ಬದಲಾವಣೆ ಕಂಡುಬರುತ್ತದೆ. ಬಹಳ ಕಾಲ ಬಂಧಿಯಾದಾಗ ಸೋಂಕಿಗೊಳಗಾಗುತ್ತವೆ ಮತ್ತು ಕಾಯಿಲೆಗೆ ತುತ್ತಾಗುತ್ತವೆ.

## ಸಂತಾನಹರಣ ಶಸ್ತ್ರಕ್ರಿಯೆ ಫಲಕಾರಿಯೆ?

ಸಂತಾನಶಕ್ತಿ ಹರಣವೇ ಸರಿಯಾದ ಕ್ರಮ ಎನ್ನುವ ತಜ್ಞರು, ಅದರಿಂದ ದುಷ್ಪರಿಣಾಮಗಳೂ ಸಾಕಷ್ಟಿವೆ ಎನ್ನುತ್ತಾರೆ. ಮಂಗಗಳ ಸ್ವಚ್ಛಂದ ಕಾಮಕೂಟದ ಮೇಲೆ ಈ ಶಸ್ತ್ರಕ್ರಿಯೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಹೆಚ್ಚಿನ ಪ್ರಮಾಣದ ಬೆದೆ ಹಾರ್ಮೋನುಳ್ಳ ಮಂಗಗಳಲ್ಲಿ ಶಸ್ತ್ರಕ್ರಿಯೆಯು ಆಕ್ರಮಣಕಾರಿ ಪ್ರವೃತ್ತಿಯನ್ನು ಹೆಚ್ಚಿಸುತ್ತದೆ. ಗಂಡು ಕೋತಿಗಳಷ್ಟೇ ಅಲ್ಲ, ಹೆಣ್ಣಿನ ಸಂತಾನಶಕ್ತಿ ಹರಣ ಆದಾಗ ಮಾತ್ರ ಸಮಸ್ಯೆಗೆ ಪರಿಹಾರ ದೊರಕುತ್ತದೆ ಎನ್ನುತ್ತಾರೆ. ವೈದ್ಯರ ಪ್ರಕಾರ ಗಂಡಿನ ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ ಹೆಣ್ಣಿನದಕ್ಕಿಂತ ಸುಲಭ.

ಹೆಣ್ಣು–ಗಂಡು ಕೋತಿಗಳಿಗೆ ಪ್ರತ್ಯೇಕ ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ ಕೈಗೊಳ್ಳುವಂತೆ 2023ರ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರ